ಕರ್ನಾಟಕ ಸರ್ಕಾರ

ಸಂಖ್ಯೆ: ಬಿಟಿಇ/62/ಇಎಫ್‌ಎಸ್/2017

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ.
ಅರಮನೆ ರಸ್ತೆ, ಬೆಂಗಳೂರು,
ದಿನಾಂಕ:16.04.2018.

## ಸುತ್ತೋಲೆ

ವಿಷಯ:-ತಾಂತ್ರಿಕ ಪರೀಕ್ಷಾ ಮಂಡಳಿ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಮತ್ತು ಗಣಿ ಶಾಲೆಗಳು 2018 ರ ಏಪ್ರಿಲ್/ಮೇ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಗೆ ಬೇಕಾಗಿರುವ ಲೇಖನ ಸಾಮಾಗ್ರಿಗಳನ್ನು ಪಡೆದುಕೊಂಡು ನಿಗದಿಪಡಿಸಲಾದ ದಿನಾಂಕದಂತೆ ಪರೀಕ್ಷೆಯನ್ನು ನಡೆಸುವ ಬಗ್ಗೆ

ಉಲ್ಲೇಖ:-1)ಈ ಕಛೇರಿಯ ಸುತ್ತೋಲೆ ಸಂಖ್ಯೆ; ಬಿಟಿಇ/ 07 /ಇ.ಸಿ.ಎಸ್ (01) 2017-18 ದಿನಾಂಕ.06-04-2018.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದನ್ವಯ 2018 ರ ಏಪ್ರಿಲ್/ಮೇ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ 19.04.2018 ರಿಂದ 02.05.2018 ರವರೆಗೆ ನಡೆಸುವಂತೆ ಸೂಚಿಸಲಾಗಿದೆ.ಚುನಾವಣಾ ಆಯೋಗವು ಕರ್ನಾಟಕ ವಿಧಾನಸಭಾ ಚುನಾವಣೆ-2018 ರ ಪ್ರಯುಕ್ತ, ದಿನಾಂಕ:27.03.2018 ರಿಂದ "ಚುನಾವಣಾ ನೀತಿ ಸಂಹಿತೆ (code of conduct)" ಪ್ರಕಟಿಸಿದೆ. "ಚುನಾವಣಾ ನೀತಿ ಸಂಹಿತೆ (code of conduct)" ಪ್ರಕಟಿಸಿದ ಹಿನ್ನಲೆಯಲ್ಲಿ 2018 ರ ಏಪ್ರಿಲ್/ಮೇ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲು ಬೇಕಾಗಿರುವ ಲೇಖನ ಸಾಮಾಗ್ರಿಗಳನ್ನು ಸರಬರಾಜು ಮಾಡಲು ವಿಳಂಬವಾದ ಪ್ರಯುಕ್ತ, 2018 ರ ಏಪ್ರಿಲ್/ಮೇ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲು ಬೇಕಾಗಿರುವ ಲೇಖನ ಸಾಮಾಗ್ರಿಗಳಿಗೆ ಈ ಹಿಂದೆ ಸರಬರಾಜು ಮಾಡಲಾದ ಪ್ರಾಯೋಗಿಕ/ಥಿಯರಿ ಉತ್ತರ ಪತ್ರಿಕೆಗಳನ್ನು ಉಪಯೋಗಿಸುವಂತೆ ತಿಳಿಸಲಾಗಿದೆ. ಒಂದು ವೇಳೆ ಕೊರತೆ ಬಿದ್ದಲ್ಲಿ ಮಾತ್ರ ಸಂಸ್ಥೆಯ ಸಿಬ್ಬಂದಿಯೊಬ್ಬರನ್ನು "ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು" ಇಲ್ಲಿಗೆ ನಿಯೋಜನೆ ಮಾಡಿ, ತಾಂತ್ರಿಕ ಪರೀಕ್ಷಾ ಮಂಡಳಿಯ ಉಗ್ರಾಣ ವಿಭಾಗದಿಂದ ಪಡೆದುಕೊಂಡು ಈಗಾಗಲೇ ನಿಗದಿಪಡಿಸದ ಅವಧಿಯಲ್ಲಿ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲು ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು

**ಇವರಿಗೆ,**

ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಮತ್ತು ಗಣಿ ಶಾಲೆಗಳ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿ;-ಮಾಹಿತಿಗಾಗಿ**

1. ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು/ಹಿರಿಯ ತಾಂತ್ರಿಕ ಸಹಾಯಕರು/ ರಿಜಿಸ್ಟ್ರಾರ್ [ಪರೀಕ್ಷೆ]
2. ಇ- ಆಡಳಿತ ವಿಭಾಗಕ್ಕೆ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ.
3. ಕಛೇರಿ ಪ್ರತಿ.